ಅಲ್ಲ, ಭಾರತಾದ್ಯಂತ ಈ ವಿಚಾರದಲ್ಲಿ ವ್ಯತ್ಯಾಸವಿರುವುದರಿಂದ, ಅವರ ಬಗ್ಗೆ ಒಂದು ಯೂನಿಫಾರಂ ಲಿಸ್ಟ್ ಮಾಡಬೇಕೆಂಬ ದೃಷ್ಟಿ ಇರುವುದರಿಂದ ಕೇಂದ್ರಸರ್ಕಾರದವರು ಅದನ್ನು ಪರಿಶೀಲನೆ ಮಾಡುತ್ತಿದ್ದಾರೆ. ಅದು ಈಗಾಗಲೇ ಪಾರ್ಲಿಮೆಂಟ್ ಮುಂದೆ ಇದೆ.

ಶ್ರೀ ಜಿ. ಸಿ. ತಮ್ಮಣ್ಣ.—ಉತ್ತರದಲ್ಲಿ (ಅ) ಉಪಪ್ರಶ್ನೆಗೆ ಪ್ರದೇಶ ನಿರ್ಬಂಧನೆಯನ್ನು ತೆಗೆದುಹಾಕಲು ಭಾರತ ಸರ್ಕಾರದವರನ್ನು ಕೋರಲಾಗಿದೆ ಎಂಬುದಾಗಿ ಹೇಳಿದೆ. ಅದೇನು ಕೋರಿಕೆ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಸ್ಟೇಟ್ ರೀಆರ್ಗನೈಜೇಷನ್ ಆಕ್ಟ್ ಪ್ರಕಾರ ನಾವು ಒಂದು ಲಿಸ್ಟ್ ಮಾಡಿದ್ದೇವೆ. ಈಗಾಗಲೇ ನಾವು ಯಾವ ಒಂದು ಪ್ರಾರ್ಥನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದೇವೋ ಅದು ಕೇಂದ್ರಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಜೆ. ಎಲ್. ಕಟ್ಟಾಡಿ.—ಮಾನ್ಯ ಮಂತ್ರಿಗಳು ನಾನು ಕೇಳುವ ಪ್ರಶ್ನೆ ಬಹಳ ಸ್ಪೆಸಿಫಿಕ್ಕಾಗಿ ಇರುವುದರಿಂದ ಅದರ ಬಗ್ಗೆ ಉತ್ತರವನ್ನು ಸರಿಯಾಗಿ ಕೊಡುತ್ತಾರೆಂದು ತಿಳಿದು ಕೇಳುತ್ತಿದ್ದೇನೆ. ಈಗ ಕೆಲವೊಂದು ಜಿಲ್ಲೆಗಳಲ್ಲಿ ಕೆಲವು ಜಾತಿಗಳವರನ್ನು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನೊಳಗೆ ಸೇರಿಸಿಲ್ಲ. ಅಂತಹ ಜಾತಿಗಳನ್ನು ಏನಾದರೂ ಕೇಂದ್ರಸರಕಾರಕ್ಕೆ ಶಿಫಾರಸು ಮಾಡಿದ್ದೀರಾ ? ಷೆಡ್ಯೂಲ್ಡ್ ಜಾತಿಯೊಳಗೆ ಕೆಲವು ಜಾತಿಗಳವರನ್ನು ಸೇರಿಸದೆ ತೆಗೆದುಹಾಕಿದ್ದೀರಿ. ಅವು ಯಾವುವು ? ನನ್ನ ಪ್ರಶ್ನೆಗೆ ಉತ್ತರವಾಗಿ ಇತರೇ ಪ್ರದೇಶಗಳಲ್ಲಿ ಕೆಲವು ಕೋಮಿನವರನ್ನು ಅನುಸೂಚಿತ ಜಾತಿಯವರೆಂದು ಪರಿಗಣಿಸದೇ ಇರುವ ವಿಷಯ ಸರ್ಕಾರಕ್ಕೆ ಗೊತ್ತಿದೆಯೆಂದು ಹೇಳುತ್ತೀರಿ. ಈ ಪ್ರಶ್ನೆಗೆ ಮಂತ್ರಿಗಳು ಏಕೆ ಉತ್ತರ ಹೇಳುವುದಕ್ಕೆ ತಯಾರು ಇಲ್ಲವೋ ಗೊತ್ತಿಲ್ಲ. ಉತ್ತರದಲ್ಲಿ ಏಳೆಂಟು ಜಾತಿಗಳನ್ನು ಷೆಡ್ಯೂಲ್ಡ್ ಜಾತಿಯೊಳಗೆ ಸೇರಿಸಿದ್ದೇವೆಂದು ಮಂತ್ರಿಗಳು ಹೇಳಿದರು. ಅವು ಯಾವುವು ? ಮತ್ತೊಂದು ವಿಷಯವನ್ನು ಮಂತ್ರಿಗಳು ಹೇಳಿದರು. ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ತೀರ್ಮಾನಮಾಡಿದಂತೆ ಶಿಫಾರಸುಮಾಡಿದ್ದೇವೆಂದು. ನೀವು ಜಾಯಿಂಟ್ ಸೆಲೆಕ್ಟ್ ಕಮಿಟಿಯನ್ನು ಯಾವಾಗ ಮಾಡಿದಿರಿ ? ಅದರಲ್ಲಿ ಶಿಫಾರಸು ಮಾಡಿರುವುದು ಏನು ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಸದಸ್ಯರು ಸ್ಪೆಸಿಫಿಕ್ಕಾಗಿ ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರ ಹೇಳುತ್ತೇನೆ.

ಶ್ರೀ ಜೆ. ಎಲ್. ಕಟ್ಟಾಡಿ.—ನಾನು ಈ ವಿಚಾರವಾಗಿ ಅರ್ಧಗಂಟೆಯ ಪ್ರಶ್ನೆಯನ್ನು ಕಳುಹಿಸುತ್ತೇನೆ. ತಾವು ಅದನ್ನು ಈ ಸಭೆಯಲ್ಲಿ ಪುನಃ ತೆಗೆದುಕೊಳ್ಳಲು ಪರ್ಮಿಷನ್ ಕೊಡಬೇಕು.

Sri D. DEVARAJ URS (Chief Minister).—If the Hon. Speaker permits me, I am getting the names of those castes which have been either removed or added and present a list of it to the House through the Hon'ble Speaker.

RESERVATION IN PROMOTIONAL VACANCIES TO S.C. AND S.T.

185. Sri G. PUTTASWAMY (Mudigere).—

Will the Chief Minister be pleased to state :—

(*a*) the percentage of representation in appointment so far given in the Government service in all classes of vacancies for Scheduled Castes and Scheduled Tribes in the State (Departmentwise and classwise and Districtwise in each unit information may be furnished) ;

(*b*) the action taken to maintain the percentage guaranteed under the Constitution ;

(SRI G. PUTTASWAMY)

(*c*) whether the Government is aware of a Supreme Court decision regarding reservation of posts even in promotional vacancies;

(*d*) if so, the reasons for delay in the implementation of this decision in the State?

Sri D. DEVARAJ URS (Chief Minister).—

(*a*) A Statement containing the number of persons belonging to Scheduled Castes and Scheduled Tribes working in different classes of service in various Departments and their percentages in Services as on 1st January 1971 is placed on the Table of the House. *It is not practicable to collect districtwise figures.

(*b*) Reservation of any specific percentage of vacancies is not guaranteed under the Constitution, Government has, however, reserved 15 and 3 per cent vacancies in favour of Scheduled Castes and Scheduled Tribes respectively while making direct recruitment to all the cadres in the State Civil Services.

A Special Cell has been created in the Directorate of Social Welfare to inspect all offices for verifying if the orders regarding reservations are beig followed or not and bringing to the notice of Government any violations.

The Employment Exchanges have also been directed to bring to the notice of Government any such lapses.

In order to achieve the requisite percentage of vacancies for Scheduled Castes and Scheduled Tribes, orders have been issued recently permitting carry forward of reserved vacancies lost to them on any occasion of recruitment to the next two occasions and reduction of an equal number of vacancies reserved for other backward classes, subject to a maximum of half the number reserved for backward classes.

(*c*) Yes; Government is aware of the decision of the Supreme Court upholding reservation of certain Class III posts to be filled by promotion by selection in the case of the General Manager, Southern Railway *Vs.* Rangachari.

(*d*) The Supreme Court has not issued any directions in the Judgement and hence the question of delay in implementing the decision does not arise.

ಶ್ರೀ ಜಿ. ಪುಟ್ಟಸ್ವಾಮಿ.—(ಅ) ಪ್ರಶ್ನೆಗೆ ಉತ್ತರವಾಗಿ ಇಂತಿಷ್ಟೇ ಶೇಕಡಾವಾರು ಪ್ರಮಾಣದಲ್ಲಿ ಖಾಲಿ ಹುದ್ದೆಗಳನ್ನು ಮೀಸಲಾಗಿಡಬೇಕೆಂದು ಸಂವಿಧಾನದಲ್ಲಿ ಭರವಸೆ ಇರುವುದಿಲ್ಲವೆಂದು

*Copy placed in the Mysore Legislature Library *vide* No. 1, dated 27th November 1972.

ಹೇಳಿದೆ. ಈಗಾಗಲೇ ನಮ್ಮ ಸರ್ಕಾರದವರು ರಾಜ್ಯದ ಸಿವಿಲ್ ಸೇವೆಯ ಎಲ್ಲ ದರ್ಜೆಯ ಹುದ್ದೆಗಳಿಗಾಗಿ ನೇರವಾಗಿ ನೇಮಕಾತಿಯನ್ನು ಮಾಡುವಾಗ ಸೇಕಡ 15 ಮತ್ತು ಸೇಕಡ 3ರಷ್ಟು ವಿಶೇಷವಾಗಿಟ್ಟಿರುವರು. ವಿಶೇಷವಾಗಿಟ್ಟಿರುವತಕ್ಕ ನೌಕರಿಗಳಲ್ಲಿ ಸಾಕಾದಷ್ಟು ಪ್ರಾತಿನಿಧ್ಯ ಇಲ್ಲ. ಅವರು ಕೊಟ್ಟಿರುವ ಪಟ್ಟಿಯಲ್ಲಿ ನೋಡಿದರೆ, ಅನೇಕ ಇಲಾಖೆಗಳಲ್ಲಿ ಕೇವಲ ಸೇಕಡ ಒಂದರಷ್ಟೂ ಅವರಿಗೆ ಪ್ರಾತಿನಿಧ್ಯವಿಲ್ಲ. ಇದುವರೆಗೆ ಒಬ್ಬರನ್ನೂ ನೇಮಕಮಾಡಿಲ್ಲ. ಈರೀತಿಯಾಗಿರತಕ್ಕ ನೌಕರರ ಕೊರತೆಯನ್ನು ಸರಿಪಡಿಸಲು ಸರ್ಕಾರಕ್ಕೆ ಇನ್ನೆಷ್ಟು ಸಮಯ ಬೇಕಾಗುತ್ತದೆ? ಇನ್ನು ಎಂಪ್ಲಾಯ್‌ಮೆಂಟ್ ಸೆರ್ ಎಂದುದಾಗಿ ಮಾಡಿದೆ ಎಂದುದಾಗಿ ಹೇಳಿದ್ದೀರಿ. ಅವರು ಎಷ್ಟು ಪ್ರಕರಣಗಳಲ್ಲಿ ಸರ್ಕಾರಕ್ಕೆ ಈಗಾಗಲೇ ವರದಿಮಾಡಿದ್ದಾರೆ? ಅಂತಹ ವರದಿಗಳ ಮೇಲೆ ಸರ್ಕಾರದವರು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ?

†ಶ್ರೀ ಡಿ. ದೇವರಾಜ ಅರಸ್,—ಮಾನ್ಯ ಸದಸ್ಯರು ಕೇಳಿರತಕ್ಕ ಪ್ರಶ್ನೆಗಳು ಒಂದಕ್ಕೊಂದು ಸರಪಳಿ ಇದ್ದಹಾಗೆ ಇವೆ. ನನಗೆ ಜ್ಞಾಪಕ ಬಂದಹಾಗೆ ಅವಕ್ಕೆ ಉತ್ತರ ಕೊಡುತ್ತೇನೆ. ಮಾನ್ಯ ಸದಸ್ಯರು ನಮ್ಮ ಅಂಕ ಅಂಶಗಳು ಸುಳ್ಳು ಎಂಬುದಾಗಿ ಹೇಳಿದರು. ನಾವು ಹೇಳಿರುವುದು ಸುಳ್ಳು ಆದರೆ, ಅವರಲ್ಲಿ ಏನು ಅಂಕಿಅಂಶಗಳಿವೆಯೋ ಅವನ್ನು ನಮಗೆ ಕೊಡಲಿ, ಅದನ್ನು ನೋಡುವುದಕ್ಕೆ ನಾನು ಸಿದ್ಧನಿದ್ದೇನೆ. ಮಾನ್ಯ ಸದಸ್ಯರು ಡಿಫ್ಯಿಕ್ಟ್‌ವೈಜ್, ಕ್ಲಾಸ್‌ವೈಜ್, ಡಿಪಾರ್ಟ್‌ಮೆಂಟಲ್‌ವೈಜ್, ಇದರ ಬಗ್ಗೆ ಮಾಹಿತಿಯನ್ನು ಒದಗಿಸಬೇಕೆಂದು ಕೇಳಿದ್ದಾರೆ. ಅಸ್ಟೆರ್ಸಾ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಒಂದು ಸ್ಟೇಟ್‌ಮೆಂಟನ್ನು ಈಗಾಗಲೇ ಈ ನಡೆಯ ಮುಂದೆ ಇಟ್ಟಿದ್ದೇನೆಂದು ಹೇಳಿದ್ದೇನೆ. ಅದರಲ್ಲಿ ಡಿಪಾರ್ಟ್‌ಮೆಂಟಲ್‌ವೈಜ್ ಮಾತ್ರ ಕೊಟ್ಟಿದೆ. ಮಾನ್ಯ ಸದಸ್ಯರು ಡಿಸ್ಟ್ರಿಕ್ಟ್‌ವೈಜ್ ಸಹ ಅಂಕಿ ಅಂಶಗಳನ್ನು ತರಿಸಿ ಕೊಡಬೇಕೆಂದು ಹೇಳಿದರೆ ನಾನು ಅದನ್ನು ಕೊಡುವುದಿಲ್ಲವೆಂದು ಹೇಳುವುದಿಲ್ಲ. ಅದಕ್ಕೆ ಸಾಕಾದಷ್ಟು ಕಾಲ ಬೇಕಾಗುತ್ತದೆ. ಅದನ್ನು ಬೇಕಾದರೂ ಉದ್ದಕ್ಕೂ ಸರ್ವೆಮಾಡಿಸಿ ಇನ್ನು ಆರುತಿಂಗಳಾದರೂ ಆಗಲೀ ಆ ಅಂಕಿ ಅಂಶಗಳನ್ನು ಓದಗಿಸಿಕೊಡುವುದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಪರ್ಸಂಟೇಜ್ ವಿಚಾರದಲ್ಲಿ Reservation of any specific percentage of vacancies is not guaranteed under the Constitution ಎಂದು ಹೇಳಿದ್ದಾರೆ. ಅದರಲ್ಲಿ ನನ್ನದು ಇಂಟರ್‌ಪ್ರಿಟೇಷನ್ ಏನೂ ಇಲ್ಲ. 16ನೇ ಆರ್ಟಿಕರ್ ಪ್ರಕಾರ ಇಂಟರ್‌ಪ್ರಿಟೇಷನ್ ಬೇಕಾದಷ್ಟು ಆಗಿದೆ. ಆದರೆ ನಾವು ಹೇಳಿರುವ ಪ್ರಕಾರ ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕಾಗುವುದಿಲ್ಲವೆಂಬ ಅರ್ಥ ಬರುವುದಿಲ್ಲ. Action taken to maintain the percentage guaranteed under the Constitution ಎಂಬ ಅರ್ಥ ಬರುತ್ತದೆ. ಈ ಅನ್ಯಾಯ ಕಳೆದ 25 ವರ್ಷಗಳಿಂದಲೂ ಆಗಿರಬಹುದು. ಅದನ್ನು 5 ತಿಂಗಳು ಆಥವಾ 5 ತಿಂಗಳು 5 ದಿವಸಗಳಲ್ಲಿ ಸರಿಪಡಿಸುತ್ತೇವೆಂದರೆ ಹೇಗೆ ಆಗುತ್ತದೆ? ಅದಕ್ಕೆ ಸ್ವಲ್ಪ ಕಾಲ ಬೇಕಾಗುತ್ತದೆ. ಅದರ ಬಗ್ಗೆ ತಾವು ಕೋಪ ಮಾಡಿಕೊಂಡು ಉದ್ವೇಗದಿಂದ ಮಾತನಾಡಿದರೆ ಏನೂ ಪ್ರಯೋಜನವಾಗುವುದಿಲ್ಲ. ನಾವು ಏನಾದರೂ ಇಂತಿಂಥದ್ದು ಮಾಡಿಲ್ಲವೆಂದು ಇದ್ದರೆ ಅದನ್ನು ಹೇಳಿ; ಮಾಡುತ್ತೇವೆ. ನಾವು ಆದಷ್ಟು ಈ ಪರ್‌ಸೆಂಟೇಜನ್ನು ಕೊಡಬೇಕೆಂದು ಎತ್ತೆಲ್ಲಿ ರಿಕ್ರುಟ್‌ಮೆಂಟ್ ಮಾಡುತ್ತಾರೆ, ಆಲ್ಲಿಗೆ ಕಡ್ಡಾಯವಾದ ಸೂಚನೆಗಳನ್ನು ಕೊಡುತ್ತಿದ್ದೇವೆ. ಅದನ್ನು ಮಾಡುವುದು ನಮ್ಮ ಜವಾಬ್ದಾರಿ ಇದೆ; ಅದನ್ನು ಮಾಡುತ್ತೇವೆ.

ಶ್ರೀ ಜಿ. ಪುಟ್ಟಸ್ವಾಮಿ.—ಈ ಸೋಶಿಯಲ್ ವೆಲ್‌ಫೇರ್ ಇಲಾಖೆಯಲ್ಲಿ ಒಂದು ಎಂಪ್ಲಾಯ್‌ಮೆಂಟ್ ಸೆರ್ ಎಂದು ಮಾಡಿದ್ದೀರಿ. ಇದು ಎಷ್ಟು ಪ್ರಕರಣಗಳನ್ನು ಕಂಡುಹಿಡಿದು ಸರ್ಕಾರಕ್ಕೆ ವರದಿ ಮಾಡಿದೆ; ಮತ್ತು ಅದರ ಮೇಲೆ ಏನು ಕಾರ್ಯಕ್ರಮ ಸರ್ಕಾರ ತೆಗೆದುಕೊಂಡಿದೆ?

ಶ್ರೀ ಡಿ. ದೇವರಾಜ ಅರಸ್.—ಎಷ್ಟು ಪ್ರಕರಣಗಳೆಂಬುದರ ಬಗ್ಗೆ ಪ್ರತ್ಯೇಕವಾದ ಪ್ರಶ್ನೆಯನ್ನು ಕೇಳಿದರೆ ಹೇಳುತ್ತೇನೆ.

ಶ್ರೀ ಎಚ್ ಪುಟ್ಟದಾಸ್.—25 ವರ್ಷಗಳಿಂದ ಈ ಅಂಕ ಅಂಶಗಳನ್ನು ನೋಡಿದರೆ ಅದು ಈ ರೀತಿ ಇದೆ. ಕ್ಲಾಸ್ 1, 3.54 ಇದೆ; ಕ್ಲಾಸ್ 2, 3.6 ಇದೆ ಮತ್ತು ಕ್ಲಾಸ್ 3 6.88 ಇದೆ. 25 ವರ್ಷಗಳಾದರೂ ಇದು ಬಹಳ ಕಮ್ಮಿಯೇ ಇದೆ. ಆದರಿಂದ ಆಂಧ್ರ ಪ್ರದೇಶದಲ್ಲಿ ಯಾವ ರೀತಿಯಲ್ಲಿ ರಿಸರ್ವೇಶನ್ ಇಟ್ಟುಕೊಂಡಿರುತ್ತಾರೋ, ಅದೇ ರೀತಿ ಇಲ್ಲಿಯೂ ಇರುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಡಿ. ದೇವರಾಜ ಅರಸ್.—ಅದನ್ನು ಪರಿಶೀಲನೆ ಮಾಡೋಣ. ಅದಕ್ಕಾಗಿಯೇ ನಾವು ಇಲ್ಲ ಒಂದು ಕ್ಯಾಬಿನೆಟ್ ಸಬ್ ಕಮಿಟಿ ಮಾಡಿದ್ದೇವೆ. ತಾವು ಹೇಳಿದ ಹಾಗೆ ಆಂಧ್ರದಲ್ಲಿ ಯಾವ ರೀತಿ ಇದೆ, ಕೇಂದ್ರ ಸರ್ಕಾರದಲ್ಲಿ ಯಾವ ಪದ್ಧತಿ ಇದೆ ಎಂಬುದನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಇಲ್ಲಿ ಎರಡು ವಿಚಾರಗಳು ಬರುತ್ತವೆ. ಒಂದು ರಿಕ್ರುಟ್‌ಮೆಂಟ್ ಮಾಡುವಾಗ ಪರ್‌ಸೆಂಟೇಜ್ ಹಾಕುವುದು ; ಇನ್ನೊಂದು ಪ್ರೊಮೋಶನ್ ಕೊಡುವಾಗ ಪರ್‌ಸೆಂಟೇಜ್ ಹಾಕುವುದು. ಮೊದಲನೆಯ ವಿಚಾರ ಎಲ್ಲರೂ ಒಪ್ಪಿದ್ದಾರೆ. ನುಪ್ರಿಂ ಕೋರ್ಟ್ ತೀರ್ಪು ಬಂದ ಮೇರೆ ಯಾವುದೇ ಪ್ರೊಮೋಷನ್ನಿನಲ್ಲಿ ರಿಸರ್ವ್ ಮಾಡುವುದಕ್ಕೆ ಕಾನೂನು ಅಥವಾ ಕಾನ್‌ಸ್ಟಿಟ್ಯೂಷನ್ ಅಡ್ಡಿ ಬರುವುದಿಲ್ಲ ಎಂದು ಹೇಳಿದ್ದಾರೆ. ಅದರ ಪ್ರಕಾರ ಕೆಲವು ಜಾಗ ರಿಸರ್ವ್ ಮಾಡಿದ್ದಾರೆ. ಕೇಂದ್ರ ಸರ್ಕಾರದವರು ಸಹ ರಿಸರ್ವ್ ಇಡುವುದಕ್ಕೆ ಒಂದು ಪದ್ಧತಿಯನ್ನು ಇಟ್ಟುಕೊಂಡಿದ್ದಾರೆ. ಅವರು ಒಂದು ಪರೀಕ್ಷೆ ಕಂಡಕ್ಟ್ ಮಾಡಿ, ಅದರಲ್ಲಿ ಪಾಸಾದವರಿಗೆ ಕೊಡುತ್ತಾರೆ. ಡೈರಕ್ಟ್ ರಿಕ್ರುಟ್‌ಮೆಂಟಿನಲ್ಲಿ ಸಹ ಮಾರ್ಕ್ಸ್ ಕಮ್ಮಿ ಇದ್ದರೂ ತೆಗೆದುಕೊಳ್ಳುತ್ತಿದ್ದಾರೆ. ನಾವು ಇವೆಲ್ಲವನ್ನೂ ಪರಿಶೀಲನೆ ಮಾಡುವುದಕ್ಕೋಸ್ಕರ ಒಂದು ಸಬ್ ಕಮಿಟಿ ಮಾಡಿದ್ದೇವೆ. ಅದಲ್ಲದೆ ಇದರಲ್ಲಿ ಯಾರಿಗೆ ಎಲ್ಲರಿಗಿಂತ ಹೆಚ್ಚು ಇಂಟರೆಸ್ಟ್ ಇದೆ, ಅಂಥವರನ್ನು ಸಹ ಹಾಕಿದ್ದೇವೆ. ಆದ್ದರಿಂದ ಆ ಸಬ್ ಕಮಿಟಿ ಏನು ಹೇಳುತ್ತದೆ; ಅದರಂತೆ ಮಾಡಲು ಅದನ್ನು ಪರಿಶೀಲನೆ ಮಾಡಿ ಕಾರ್ಯ ಕ್ರಮ ತೆಗೆದುಕೊಳ್ಳುತ್ತೇವೆ.

FINALISATION OF PROPOSALS FOR SIXTH FINANCE COMMISSION.

202. Sri D. B. KALMANKAR (Afzalpur).—

Will the Minister for Finance be pleased to state :—

(*a*) whether Government has finalised the proposals for placing them before the Sixth Finance Commission ;

(*b*) if so, whether they will furnish the details of the proposal ?

Sri M. Y. GHORPADE (Minister for Finance).—

(*a*) No.

(*b*) Does not arise.

Sri D. B. KALMANKAR.—May I know when the Government is considering to finalise the proposals ?

† Sri M. Y. GHORPADE.—Our Memorandum to the Finance Commission is almost ready and we are giving finishing touches.

Sri D. B. KALMANKAR.—Has it come to the notice of the Government that much injustice is done to the State of Mysore by the recommendation of the Fifth Finance Commission ?

Sri M. Y. GHORPADE.—We are all aware that the Fifth Finance Commission's recommendations were inadequate to Mysore. I am sure, that all Members of this House will agree that this injustice or inadequacy has been made up to a large extent. I will give you just a few figures in support of my statement.